# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ | : | **362** |
| ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ.<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 11-12-2024 |

| | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಸಾರ್ವಜನಿಕ ಸೇವಾ ಸರಕು ಮತ್ತು ರಾಷ್ಟ್ರೀಯ ಪರ್ಮಿಟ್ ಇರುವ ವಾಹನಗಳ ಸಂಖ್ಯೆ ಎಷ್ಟು? | ರಾಜ್ಯದಲ್ಲಿ ಪ್ರಯಾಣಿಕ ವಾಹನಗಳಾದ ಮ್ಯಾಕ್ಸಿ ಕ್ಯಾಬ್, ಮೋಟಾರ್ ಕ್ಯಾಬ್, ಮಜಲು ವಾಹನ, ಒಪ್ಪಂದ ವಾಹನ, ಅಖಿಲ ಭಾರತ ಪ್ರವಾಸಿ ವಾಹನ, ವಿದ್ಯಾಸಂಸ್ಥೆಯ ವಾಹನ, ಸಾರ್ವಜನಿಕ ಸೇವಾ ವಾಹನ ಮತ್ತು ರಾಷ್ಟ್ರೀಯ ಪರ್ಮಿಟ್ ಹೊಂದಿರುವ ಸರಕು ಸಾಗಣೆ ವಾಹನಗಳ ಸಂಖ್ಯೆ **6,04,863**. |
| ಆ. | ಈ ವಾಹನಗಳಿಗೆ ವೆಹಿಕಲ್ ಟ್ರ್ಯಾಕಿಂಗ್ ಡಿವೈಸ್ ಮತ್ತು ಎಮರ್ಜೆನ್ಸಿ ಬಟನ್ ಅಳವಡಿಸುವ ಪ್ರಕ್ರಿಯೆಯು ಯಾವ ಹಂತದಲ್ಲಿದೆ; ಹಾಗೂ ಎಷ್ಟು ವಾಹನಗಳಿಗೆ ಈ ಸಾಧನಗಳನ್ನು ಅಳವಡಿಸಲಾಗಿದೆ; | ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಅಧಿಸೂಚನೆ ಸಂಖ್ಯೆ: SO/1095(E), ದಿನಾಂಕ:28.11.2016 ರನ್ವಯ ಮತ್ತು ಕಾಲಕಾಲಕ್ಕೆ ಹೊರಡಿಸಿರುವ ಕೇಂದ್ರ ಸರ್ಕಾರದ ಅಧಿಸೂಚನೆ / ಪತ್ರ ಸಂಖ್ಯೆ: SO/5453(E), ದಿನಾಂಕ:25.10.2018, SO/5454(E), ದಿನಾಂಕ:25.10.2018 ಮತ್ತು SO/1081(E), ದಿನಾಂಕ:02.11.2018 ಗಳನ್ವಯ **ನಿರ್ಭಯ ಯೋಜನೆಯಡಿ** ಸಾರ್ವಜನಿಕ ಸೇವಾ ವಾಹನಗಳಿಗೆ Vehicle Location Tracking Device & Emergency Button ಅಳವಡಿಸುವ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಟಿಡಿ 57 ಟಿಡಿಒ 2019, ದಿನಾಂಕ:05.11.2023 ರನ್ವಯ ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ.<br><br>ಸದರಿ ಯೋಜನೆಯ ಭಾಗವಾಗಿ ಇಲಾಖೆಯು Command and Control Centre ಅನ್ನು ಸಾರಿಗೆ ಆಯುಕ್ತರ ಕಛೇರಿಯಲ್ಲಿ ಸ್ಥಾಪಿಸಲಾಗಿದ್ದು, ಈ ಕೇಂದ್ರವು **ದಿನಾಂಕ:19.06.2024** ರಿಂದ 24x7 ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿದೆ.<br><br>ದಿನಾಂಕ:**29.11.2024** ರವರೆಗೆ ಒಟ್ಟು **29,187** ವಾಹನಗಳಿಗೆ Vehicle Location Tracking Device & Emergency Panic Button ಅನ್ನು ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿ ಬಾಕಿ ಇರುವ ವಾಹನಗಳಿಗೆ ಸದರಿ ಸಾಧನಗಳನ್ನು ಅಳವಡಿಸಲು ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುವುದು. |
| ಇ. | ಉಪಕರಣಗಳನ್ನು ಅಳವಡಿಸದ ವಾಹನ ಮಾಲೀಕರ ವಿರುದ್ಧ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ; | ಸರ್ಕಾರದ ಆದೇಶ ಸಂಖ್ಯೆ: ಟಿಡಿ 57 ಟಿಡಿಒ 2019, ದಿನಾಂಕ:23.11.2023 ರಲ್ಲಿ, ಕರ್ನಾಟಕ ರಾಜ್ಯದಲ್ಲಿನ ಸಾರ್ವಜನಿಕ ಸೇವಾ ವಾಹನಗಳಿಗೆ ಹಾಗೂ ರಾಷ್ಟ್ರೀಯ ರಹದಾರಿ ಹೊಂದಿದ ಸರಕು ಸಾಗಾಣಿಕೆ ವಾಹನಗಳಿಗೆ Vehicle Location Tracking Device with Emergency Panic button ಸಾಧನಗಳ ಅಳವಡಿಕೆ ಯೋಜನೆಗೆ ಅನುಮೋದನೆ ನೀಡಲಾಗಿರುತ್ತದೆ. ಈ ಆದೇಶದಲ್ಲಿ, ಸದರಿ ಯೋಜನೆಗೆ ಒಳಪಡುವ ವಾಹನಗಳನ್ನು ಅರ್ಹತಾ ಪತ್ರ ನವೀಕರಣಕ್ಕೆ ಹಾಜರುಪಡಿಸಿದ ಸಮಯದಲ್ಲಿ, ಈ ಸಾಧನಗಳನ್ನು ಅಳವಡಿಸಿರುವ ಬಗ್ಗೆ ಕಡ್ಡಾಯವಾಗಿ ಖಚಿತಪಡಿಸಿಕೊಂಡು ಅರ್ಹತಾಪತ್ರ ನವೀಕರಿಸತಕ್ಕದ್ದು ಎಂದು ನಿಬಂಧನೆ ವಿಧಿಸಲಾಗಿರುತ್ತದೆ. ಅದರಂತೆ ಕ್ರಮ ಜಾರಿಯಲ್ಲಿದೆ. ಆದರೆ ಉಪಕರಣಗಳನ್ನು ಅಳವಡಿಸುವ ಪ್ರಕ್ರಿಯೆ ಇನ್ನೂ ಜಾರಿಯಲ್ಲಿರುವುದರಿಂದ ವಾಹನ ಮಾಲೀಕರ ವಿರುದ್ಧ ಪ್ರಸ್ತುತ ಕ್ರಮ ಜರುಗಿಸಿರುವ ಪ್ರಶ್ನೆ ಉದ್ಭವಿಸುವುದಿಲ್ಲ. |

<table>
<tr>
<td>ಈ.</td>
<td>ವೆಹಿಕಲ್ ಟ್ರ್ಯಾಕಿಂಗ್ ಡಿವೈಸ್ ಮತ್ತು ಎಮರ್ಜೆನ್ಸಿ ಬಟನ್ ಅಳವಡಿಸುವ ಉಪಕರಣಗಳನ್ನು ಅಳವಡಿಸುವ ಬಗ್ಗೆ ಟೆಂಡರ್ ಕರೆಯಲಾಗಿದೆಯೇ, ಕರೆದಿದ್ದಲ್ಲಿ ಟೆಂಡರ್ ಪ್ರಕ್ರಿಯೆಯ ಸಂಪೂರ್ಣ ಮಾಹಿತಿ ಹಾಗೂ ಅಂತಿಮವಾಗಿ ಎಷ್ಟು ಕಂಪೆನಿ ಗಳಿಗೆ ಕಾರ್ಯಾದೇಶ ನೀಡಲಾಗಿದೆ (ವಿವರಿಸುವುದು)</td>
<td>ಕರ್ನಾಟಕ ರಾಜ್ಯದಲ್ಲಿ ನಿರ್ದಿಷ್ಟಪಡಿಸಿದ ವಾಹನಗಳಿಗೆ VLTD ಸಾಧನ ಅಳವಡಿಸುವ ಕುರಿತು ಉಪಕರಣ ತಯಾರಕರನ್ನು empanel ಮಾಡುವ ಸಲುವಾಗಿ ಸಾರಿಗೆ ಇಲಾಖಾ ವತಿಯಿಂದ ದಿನಾಂಕ:18.01.2024 ರಂದು e-procurement portal ಮುಖಾಂತರ ಟೆಂಡರ್ ಕರೆಯಲಾಗಿತ್ತು.<br><br>ಟೆಂಡರ್ ನಲ್ಲಿ 13 ಕಂಪೆನಿಗಳು ಅರ್ಹ ಕಂಪೆನಿಗಳು ಎಂದು ನಿರ್ಣಯಿಸಲಾಗಿದೆ. ಅವುಗಳ ಪೈಕಿ, 12 ಕಂಪೆನಿಗಳು ಸಾರಿಗೆ ಇಲಾಖೆಯೊಂದಿಗೆ Contract Agreement ಗೆ ಸಹಿ ಮಾಡಿ ಒಪ್ಪಂದ ಮಾಡಿ ಕೊಂಡಿರುತ್ತವೆ. ಸದರಿ ಈ ಕೆಳಕಂಡ 12 ಕಂಪೆನಿಗಳಿಗೆ ಕಾರ್ಯಾದೇಶ ನೀಡಲಾಗಿದೆ.<br><br>
<table>
<tr><td>1. APM Kingstrack Technologies</td><td>7. Volty IoT Solutions Private Limited</td></tr>
<tr><td>2. RDM Enterprises Private Limited</td><td>8. GRL Engineers Private Limited</td></tr>
<tr><td>3. Containe Technologies Limited</td><td>9. Rosmerta Autotech Private Limited</td></tr>
<tr><td>4. Nippon Audiotronix Private Ltd.</td><td>10. Atlanta Systems Private Limited</td></tr>
<tr><td>5. Mercyda'z International Pvt.Ltd.</td><td>11. iTriangle InfoTech Private Limited (Aquila Bharath 101 with IRNSS Device only)</td></tr>
<tr><td>6. Transight Systems Private Limited</td><td>12. Ecogas Impex Private Limited</td></tr>
</table>
</td>
</tr>
</table>

**ಟಿಡಿ 45 ಟಿಡಿಕ್ಯೂ 2024**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.